# ಗರುವವ್ಯಾತಕೊ ನಿನಗೆ ಪಾಮರ ಮನುಜನೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 215.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 95.
3. **Note:** Lyrics in both the above references are same and the singer has followed these lyrics.
4. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru.

ರಾಗ: ಕಾಂಭೋಜಿ ತಾಳ: ಝಂಪೆ

ಗರುವವ್ಯಾತಕೊ ನಿನಗೆ ಪಾಮರ ಮನುಜನೆ
ಧರೆಯೊಳಗೆ ಕುರುಪತಿಗೆ ಸರಿಯೆನ್ನಬಹುದೆ || ಪ ||

ಬಲದಲ್ಲಿ ಹಲಧರನೆ ಛಲದಲ್ಲಿ ರಾವಣನೆ
ಕುಲದಲ್ಲಿ ವಸಿಷ್ಟ ಗೌತಮನೆ
ನೆಲೆಯಲ್ಲಿ ಭೃಗು ಮುನಿಯೆ ನೇಮದಲಿ ಗಾಂಗೇಯನೆ
ಒಲುಮೆಯಲಿ ವಾಲ್ಮೀಕಿ ಮುನಿಯೇನೊ ನೀನು || 1 ||

ಹಠದಲ್ಲಿ ಪ್ರಹ್ಲಾದನೆ ದಿಟದಲ್ಲಿ ಧ್ರುವರಾಯನೆ
ಶಠರೊಳಗೆ ವಿಶ್ವಾಮಿತ್ರನೆ ನೀನು
ವಿಟರೊಳು ಮನ್ಮಥನೆ ವೀರರೊಳು ಪಾರ್ಥನೆ
ಕುಟಿಲತನದಲಿ ಶಕುನಿಯೆ ನೀನು || 2 ||

ದಾನದೊಳು ಕರ್ಣನೆ ಗಾನದೊಳು ನಾರದನೆ
ಜ್ಞಾನದಲಿ ವ್ಯಾಸ ಶುಕ ಮುನಿಯೆ ನೀನು

ದೀನ ರಕ್ಷಕ ನಮ್ಮ ಪುರಂದರ ವಿಠಲನ್ನ
ಧ್ಯಾನದೊಳು ಇದ್ದು ಭವ ನೀಗು ಮನುಜ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಮನುಷ್ಯನ 'ಅಹಂಕಾರ ಪ್ರಜ್ಞೆ'ಯನ್ನು ತೀವ್ರವಾಗಿ ಖಂಡಿಸುವ ಒಂದು ಕೀರ್ತನೆ ಇದು. ನಾನು ಪರಾಕ್ರಮಿ, ಮಹಾದಾನಿ, ಮಹಾಜ್ಞಾನಿ ಎಂದು ಕೊಚ್ಚಿಕೊಳ್ಳುವವರನ್ನು ಮಾತ್ರವಲ್ಲದೆ ಎಂಥೆಂಥ ದುಷ್ಟರೋ ಆಗಿಹೋಗಿರುವ ನಮ್ಮ ದೇಶದಲ್ಲಿ ಅಂಥ ದುಷ್ಟರ ಮಟ್ಟಕ್ಕೆ ಬರಲಾಗದ ಇಂದಿನ ದುಷ್ಟರ ಗರ್ವದಲ್ಲಿ ಅರ್ಥವಿಲ್ಲ ಎಂದು ಘೋಷಿಸಿರುವ ಬಗೆ ಹೊಸತು.

**ಕುರುಪತಿ** – ದುರ್ಯೋಧನ.

**ಹಲಧರ** – ಬಲರಾಮ.

**ಗಾಂಗೇಯ** – ಭೀಷ್ಮ.

**ಪಾರ್ಥ** – ಅರ್ಜುನ.

**ಭವ** – ಸಂಸಾರ.

**Classification:** Keerthane
**Ankita:** purandara vittala
**Location:** NA
**Category:** hari sarvottama
**Sub-Category:** garva, nara, bhumi, kourava, ravana, muni, prahallada, Dhruva, manmatha, dAna, narada, jnana, dhyAna, bhava, nara, bhrugu, olume, Valmiki,
**Pravachana:** Vyasa Vidya Vahini
**Explanation:** Dr. Vijayendra Desai, Dharwad.